ಸಪ್ಲೈ ಮಾಡಿರಲಿಲ್ಲ, ಔಷಧಿಗಳನ್ನು ಜಾಸ್ತಿ ಮಾಡಿಕೊಂಡು ಬಂದಿದ್ದೇವೆ ಔಷಧಿಗಾಗಿ ಜಾಸ್ತಿ ಹಣವನ್ನು ಇಟ್ಟಿದ್ದೇವೆ ಎಂದೂ ಹೇಳಿದ್ದೀರಿ. ಈಗಲಾದರೂ ಸರ್ಕಾರ ಕಣ್ಣು ತೆರೆದಿದೆ ಎಂದು ಕಾಣುತ್ತದೆ. ಇದಕ್ಕಾಗಿ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಆದರೆ ಟೆಂಡರ್ ಅಕ್ಸೆಪ್ಟ್ ಮಾಡುವ ಮುಂಚೆ ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲದೆ ನಡೆಸುವುದಕ್ಕೆ ಹೇಗೆ ಸಾಧ್ಯವಾಗುತ್ತಾ ಇತ್ತು ? ಈ ತರಹ ಅನಾಮಲೀಸ್ ಮೂಲಕ ಬರದ ಹಾಗೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಬಿಲ್ಡಿಂಗ್‌ಗಳನ್ನು ಯಾವಾಗ ಕಟ್ಟುತ್ತೀರಿ ಜೀಪ್ ಅನ್ನು ಯಾವಾಗ ಕೊಡುತ್ತೀರಿ ? ಹಾಗೆಯೇ ಲೇಡಿ ಡಾಕ್ಟರ್ ಅನ್ನು ಯಾವಾಗ ಅಪಾಯಿಂಟ್ ಮಾಡುತ್ತೀರಿ ಎಂಬುದನ್ನು ತಿಳಿಸಿದರೆ ನನಗೆ ಸಂತೋಷವಾಗುತ್ತದೆ.

ಶ್ರೀ ಬಿ. ರಾಚಯ್ಯ.—ಟೆಂಡರ್ ಅನ್ನು ಮುಂದಿನ ಆರ್ಥಿಕ ವರ್ಷ ಪ್ರಾರಂಭವಾಗುವುದಕ್ಕಿಂತ ಮುಂಚೆ ಒಪ್ಪಿಕೊಳ್ಳತಕ್ಕಂಥ ವ್ಯವಸ್ಥೆ ಮಾಡುತ್ತಿದ್ದೇವೆ. ಮತ್ತೆ ಬಿಲ್ಡಿಂಗ್ ಕಟ್ಟಿಸುವ ವಿಷಯದಲ್ಲಿ ಹೇಳಿದ್ದಾರೆ. ಆದು ಹಣ ಒದಗಿದ ಹಾಗೆ ಮಾಡಬೇಕಾಗುತ್ತದೆ. ಲೇಡಿ ಡಾಕ್ಟರ್ ಅನ್ನು ಆಲ್ಲಿಗೆ ಇನ್ನೂ ಮಂಜೂರು ಮಾಡಿಲ್ಲ, ಮಂಜೂರು ಮಾಡಿದ ಮೇಲೆ ಪೋಸ್ಟ್ ಮಾಡುತ್ತೇವೆ. ಹಾಲಿ ಆ ಹುದ್ದೆ ಖಾಲಿ ಇಲ್ಲ, ಆಲ್ಲಿಗೆ ಆ ಸ್ಥಾನವನ್ನು ಮಂಜೂರು ಮಾಡಿಲ್ಲ. ಲೇಡಿ ಮೇಡಿಕಲ್ ಆಫೀಸರ್ ಪೋಸ್ಟನ್ನು ಮಂಜೂರು ಮಾಡಬೇಕಾಗುತ್ತದೆ. ಆ ನಂತರ ಲೇಡಿ ಡಾಕ್ಟರ್ ಅನ್ನು ಪೋಸ್ಟ್ ಮಾಡುತ್ತೇವೆ.

೨೧ನೇ ಪಟ್ಟಿಯಿಂದ ಮುಂದೂಡಲಾದ ಪ್ರಶ್ನೆ

ಬೆಂಗಳೂರಿನಲ್ಲಿ ನಡೆದ ಸಾರ್ಕ್ ಸಮ್ಮೇಳನದ ಬಗ್ಗೆ

೧೩೮೯. ಶ್ರೀ ರಾಜುಗೌಡ.— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಲ್ಲಿ ೧೯೮೬ ರಲ್ಲಿ ನಡೆದ ಸಾರ್ಕ್ ಸಮ್ಮೇಳನದ ಸಿದ್ಧತೆಗಾಗಿ ರಾಜ್ಯ ಸರ್ಕಾರವು ವೆಚ್ಚ ಮಾಡಿದ ಮೊಬಲಗೆಷ್ಟು ?

ಆ) ಈ ಸಮ್ಮೇಳನಕ್ಕಾಗಿ ಕೇಂದ್ರ ಸರ್ಕಾರವು ಒದಗಿಸಿದ ಹಣವೆಷ್ಟು ?

ಇ) ಈ ಸಮ್ಮೇಳನದಿಂದ ರಾಜ್ಯಕ್ಕೆ ದೊರೆತಿರುವ ಪ್ರತ್ಯಕ್ಷ ಹಾಗೂ ಪರೋಕ್ಷ ಸ್ಥಾನಮಾನ ವಾದರೂ ಏನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಬೆಂಗಳೂರಿನಲ್ಲಿ ೧೯೮೬ ರಲ್ಲಿ ನಡೆದ ಸಾರ್ಕ್ ಸಮ್ಮೇಳನಕ್ಕಾಗಿ ರಾಜ್ಯ ಸರ್ಕಾರವು ೧೧೭೯. ೭೪೨ ಲಕ್ಷ ರೂ.ಗಳನ್ನು ವೆಚ್ಚ ಮಾಡಿದೆ.

ಆ) ೨೫೭.೫೯ ಲಕ್ಷ ರೂ.ಗಳು

ಇ) ೧) ಈ ಸಮ್ಮೇಳನದಿಂದ ಕರ್ನಾಟಕ ರಾಜ್ಯ ಹಾಗೂ ಬೆಂಗಳೂರು ನಗರ ಅಂತರ ರಾಷ್ಟ್ರೀಯ ಖ್ಯಾತಿಗಳಿಸಲು ಸಾಧ್ಯವಾಯಿತು.

೨) ಸಾರ್ಕ್ ಸಮ್ಮೇಳನದ ನಿರ್ಣಯಗಳು ಬೆಂಗಳೂರು ಸಮ್ಮೇಳನದ ನಿರ್ಣಯಗಳೆಂದೇ ಕರೆಯಲ್ಪಡುವುದರಿಂದ ಬೆಂಗಳೂರಿಗೆ ಜಾಗತೀಕ ಖ್ಯಾತಿ ದೊರೆತಿದೆ.

೩) ಬೆಂಗಳೂರಿನಲ್ಲಿ ಅಂತರ ರಾಷ್ಟ್ರೀಯ ಸಭೆ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸ ಬಹುದೆಂಬುದನ್ನು ಸಾರ್ಕ್ ಸಮ್ಮೇಳನವು ಸಾಬೀತು ಪಡಿಸಿದೆ.

ಶ್ರೀ ಜಿ. ರಾಜೂಗೌಡ.— ಸಾರ್ಕ್ ಸಮ್ಮೇಳನಕ್ಕೆ ೧೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇದರಲ್ಲಿ ೨ ಕೋಟಿ ೫೦ ಲಕ್ಷ ರೂಪಾಯಿಗಳು ಜಮಾ ಬಂದಿದೆಯೆಂದು ಹೇಳಿದ್ದೀರಿ. ಉಳಿದ ೯ ಕೋಟಿ ರೂಪಾಯಿಗಳ ಮಂಜೂರಾತಿ ಬೇಡಿಕೆಯನ್ನು ಕೇಂದ್ರ ಸರ್ಕಾರಕ್ಕೆ ಏನಾದರೂ ಸಲ್ಲಿಸಿದ್ದೀರಾ ? ಸಾರ್ಕ್ ಸಮ್ಮೇಳನದಲ್ಲಿ ಸಭಾಂಗಣಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ. ನಮ್ಮ ದೇಶದಿಂದ ಮತ್ತು ಹೊರದೇಶಗಳಿಂದ ಬರತಕ್ಕಂಥ ರಾಜರುಗಳು ಮತ್ತು ಪ್ರಧಾನ ಮಂತ್ರಿಗಳಿಗೆ

ಅವರು ಉಳಿದುಕೊಂಡ ಜಾಗಗಳಲ್ಲಿ ಹೊರಗಡೆ ಸುಭದ್ರತೆಯು ದೃಷ್ಟಿಯಿಂದ ಎಷ್ಟು ಖರ್ಚು ಮಾಡಿದ್ದೀರಿ ಮತ್ತು ರಸ್ತೆ ರಿಪೇರಿಯ ಬಗ್ಗೆ ಎಷ್ಟು ಖರ್ಚು ಮಾಡಿದ್ದೀರಿ. ಆಸ್ಪತ್ರೆಗಳಲ್ಲಿ ಔಷಧಗಳನ್ನು ಕೊಳ್ಳಲು ಎಷ್ಟು ಹಣ ಖರ್ಚು ಮಾಡಿದ್ದೀರಿ, ಇದೆಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ದಯವಿಟ್ಟು ಉತ್ತರಿಸಬೇಕೆಂದು ಕೋರುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಅತಿಥಿಗಳು ಬಂದಾಗ ಆ ಖರ್ಚುಗಳನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ. ರಸ್ತೆ ಬಗ್ಗೆ ಕಾರ್ಪೊರೇಷನ್‌ನವರಿಗೆ ಕೇಂದ್ರ ಸರ್ಕಾರದವರು ೨ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಮ್ಮ ಆಸ್ಪತ್ರೆಗಳಲ್ಲಿ ಆಕಸ್ಮಾತ್ತಾಗಿ ಬಂದ ಅತಿಥಿಗಳಿಗೆ ಖಾಯಿಲೆ ಬಿದ್ದರೆ ಅವರಿಗೆ ಔಷಧೋಪಚಾರಕ್ಕಾಗಿ ವಿಶೇಷ ವ್ಯವಸ್ಥೆ ಮಾಡಿದ್ದೇವೆ. ಇದಕ್ಕಾಗಿ ೫೭ ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರ ಕೊಟ್ಟಿದೆ, ಇಷ್ಟೇ ಹೊರತು ಕೇಂದ್ರ ಸರ್ಕಾರ ಇನ್ನು ಏನೂ ಕೊಟ್ಟಿಲ್ಲ. ಬಾಕಿ ಎಲ್ಲಾ ಖರ್ಚುಗಳನ್ನು ರಾಜ್ಯ ಸರ್ಕಾರವೇ ಭರಿಸಿದೆ. ಮತ್ತು ನಾವು ೫೫ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಇವರಲ್ಲಿ ತನ್ನ ಬಾಕಿಯನ್ನು ಅವರು ಒಪ್ಪಿಕೊಳ್ಳಬೇಕೆಂದು ಅನೇಕ ಸಲ ಪತ್ರ ಬರೆದಿದ್ದೇವೆ. ಇದಕ್ಕೆ ಅವರು ಒಪ್ಪಿಕೊಳ್ಳಬಹುದೆಂಬ ಆಸೆ ನಮಗಿದೆ.

ಶ್ರೀ ಜಿ. ರಾಜೂಗೌಡ.— ಸಾರ್ಕ್ ಸಮ್ಮೇಳನದಿಂದ ಬೆಂಗಳೂರು ನಗರ ಕೂಡ ಅಂತರಾಷ್ಟ್ರೀಯ ಮಟ್ಟದ ಖ್ಯಾತಿಯನ್ನು ಗಳಿಸಿದೆ ಎಂದು ಹೇಳಿದ್ದೀರಿ. ಈ ದೃಷ್ಟಿಯಿಂದ ಬೆಂಗಳೂರು ವಿಮಾನ ನಿಲ್ದಾಣವನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಏರಿಸುವುದಕ್ಕೆ ತಾವು ಪ್ರಧಾನ ಮಂತ್ರಿಗಳ ಹತ್ತಿರ ಮಾತನಾಡಿದ್ದೀರಿ. ಮತ್ತು ಈಗಾಗಲೇ ದೂರದರ್ಶನದಲ್ಲಿ ದೆಹಲಿ, ಬೊಂಬಾಯಿ, ಮದ್ರಾಸ್, ಕಲ್ಕತ್ತಾ ಇವುಗಳ ಹವಾಮಾನವನ್ನು ಬಿತ್ತರಿಸುವಂತೆ ಬೆಂಗಳೂರು ನಗರದ ಹವಾಮಾನವನ್ನು ಸಹ ಬಿತ್ತರಿಸುವಂತೆ ಕೇಳಿಕೊಳ್ಳಲು ಒಂದು ಸರ್ವ ಪಕ್ಷಗಳ ನಿಯೋಗವನ್ನು ದೆಹಲಿಗೆ ತೆಗೆದುಕೊಂಡು ಹೋಗುತ್ತೀರಾ ? ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಸರ್ವಪಕ್ಷಗಳ ನಿಯೋಗವನ್ನು ದೆಹಲಿಗೆ ಕೊಂಡುಯ್ಯುವುದಾಗಿ ಹೇಳಿದ್ದೀರಿ. ಅಂಥ ಸಂದರ್ಭ ಬಂದಾಗ ಬೆಂಗಳೂರು ವಿಮಾನ ನಿಲ್ದಾಣವನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಸೇರಿಸಲು ಮತ್ತು ಬೆಂಗಳೂರು ದೂರದರ್ಶನದಲ್ಲಿ ಹವಮಾನ ಬಿತ್ತರಿಸುವಂತೆ ತಾವು ಸರ್ವ ಪಕ್ಷಗಳ ನಿಯೋಗವನ್ನು ಕರೆದುಕೊಂಡು ಹೋಗುತ್ತೀರಾ ? ಈ ನಿಯೋಗಗಳ ವ್ಯವಸ್ಥೆಯಲ್ಲಿ ಸಂಖ್ಯಾ ಬಲದಲ್ಲಿ ಪ್ರಾಮುಖ್ಯತೆ ಒಂದು ಭಾಗದಷ್ಟು ಇರುವ ಇಂಡಿಪೆಂಡೆಂಟ್ ಪಕ್ಷದ ಶಾಸಕರ ಪ್ರತಿನಿಧಿಗಳನ್ನು ಸಹ ಕರೆದುಕೊಂಡು ಹೋಗಿ ಈ ವಿಷಯಗಳನ್ನೆಲ್ಲಾ ಪ್ರಸ್ತಾಪ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಸದಸ್ಯರು ಒಂದೇ ಪ್ರಶ್ನೆಯಲ್ಲಿ ೧೫-೨೦ ಉಪ ಪ್ರಶ್ನೆಗಳನ್ನು ಸೇರಿಸಿದ್ದಾರೆ. ಆದ್ದರಿಂದ ಈ ಎಲ್ಲದಕ್ಕೂ ಉತ್ತರ ಕೊಡುವುದು ಕಷ್ಟ. ಈ ಸಾರ್ಕ್ ಸಮ್ಮೇಳನದಿಂದ ನಮಗೆ ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯಕ್ಷವಾಗಿ ಪ್ರಯೋಜನವಾಗಿದೆ. ದೂರದರ್ಶನದಲ್ಲಿ ಈಗ ದೇಶದ ನಾಲ್ಕು ದೊಡ್ಡ ನಗರಗಳ ಹವಾಮಾನವನ್ನು ತಿಳಿಸುತ್ತಿದ್ದಾರೆ. ಅದರ ಜೊತೆಗೆ ಬೆಂಗಳೂರು ನಗರವನ್ನು ಸಹ ಈ ನಾಲ್ಕು ದೊಡ್ಡ ನಗರಗಳ ಜೊತೆಗೆ ಸೇರಿಸುವಂತೆ ನಾವು ಕೇಂದ್ರಕ್ಕೆ ತಿಳಿಸಬೇಕೆಂದು ಮಾನ್ಯ ರಾಜೂಗೌಡರು ಹೇಳಿದ್ದಾರೆ. ಹಾಗೆ ನೋಡಿದರೆ, ಬೆಂಗಳೂರಿಗೆ ಆ ಬಂದು ಸ್ಟೇಟಸ್ ಬಂದಿದೆ. ಈ ನಾಲ್ಕು ನಗರಗಳನ್ನು ಬಿಟ್ಟರೆ ಬೆಂಗಳೂರು ಅತಿ ಮಹತ್ವ ಪಡೆದ ನಗರ ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದ್ದರಿಂದ ಕೇಂದ್ರ ಸರ್ಕಾರ ಈ ಕೆಲಸ ಮಾಡಬೇಕು. ಕೇವಲ ದೂರದರ್ಶನದಲ್ಲಿ ಬೆಂಗಳೂರು ನಗರದ ಹವಮಾನ ಪರಿಸ್ಥಿತಿಯನ್ನು ರಾತ್ರಿ ಹೊತ್ತು ಪ್ರಸಾರ ಮಾಡಿದರೆ ನಮಗೇನು ಕೊಂಬು ಬರುವುದಿಲ್ಲ. ಆದರೆ ಈ ಸಾರ್ಕ್ ಸಮ್ಮೇಳನದಿಂದ ನಮಗೆ ಏನು ಲಾಭ ಆಗಿದೆ ಎಂದರೆ, ಈ ಸಮ್ಮೇಳನ ನಡೆದ ನಂತರ ಈ ಬೆಂಗಳೂರು ವಿಮಾನ ನಿಲ್ದಾಣವನ್ನು ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನಾಗಿ ಮಾಡಬೇಕೆಂಬ ಬಗ್ಗೆ ವಿಶೇಷವಾದ ಜಾಲನೆ ಬಂದಿದೆ. ಕೇಂದ್ರ ಸರ್ಕಾರ ಇದರ ಬಗ್ಗೆ ಒಂದು ತೀರ್ಮಾನವನ್ನು ಮಾಡಿದೆ.

ಪ್ರಶ್ನೆ: ೧೫೯೧(ವಿಶೇಷ ಪಟ್ಟಿ).— ಮಾನ್ಯ ಸದಸ್ಯರು ಹಾಜರಿಲ್ಲ.